

‘ಖಂಡಿತ ಹೌದು, ಏಕೆ?’

‘ಏನಿಲ್ಲ, ನನಗೆ ಆಶ್ಚರ್ಯವಾಯಿತಷ್ಟೇ. ಇವತ್ತು ಮಧ್ಯಾಹ್ನ ಬಾರ್ಚೆಸ್ಟರ್‌ನಲ್ಲಿರುವ ಔಷಧಿಯಂಗಡಿಗೆ ಹೋಗಿದ್ದೆ. ನಾನು ಖರೀದಿಸಿದ ವಸ್ತುವೊಂದಕ್ಕೆ ನಂಜಿನ ಪುಸ್ತಕದಲ್ಲಿ ಸಹಿ ಹಾಕಬೇಕಾಗಿ ಬಂತು. ಕೊನೆಯ ಹೆಸರನ್ನು ಗಮನಿಸಿದೆ. ಅಲ್ಲಿ ಪೊಟಾಷಿಯಂ ಸಯನೈಡ್ ಎಂದಿದ್ದು ಕ್ಲಾಡ್ ಲ್ಯಾಂಗ್ಟನ್‌ನ ಸಹಿ ಇತ್ತು.’

‘ಅದು ವಿಚಿತ್ರವೇ ಸರಿ’ ಎಂದು ಹ್ಯಾರಿಸನ್ ದಿಟ್ಟಿಸಿ ನೋಡಿದ. ‘ಅಂತಹ ಅಪಾಯಕಾರಿ ವಸ್ತುವನ್ನು ಅವನು ಎಂದಿಗೂ ಬಳಸುವುದಿಲ್ಲವೆಂದು ನಿನ್ನೆ ತಾನೆ ಹೇಳಿದ್ದ; ಅಷ್ಟಲ್ಲದೇ ಅದನ್ನು ಕೀಟನಾಶಕವಾಗಿ ಮಾರಾಟ ಮಾಡಬಾರದೆಂದು ಹೇಳಿದ್ದ.’

ಪ್ವರೊ ಗುಲಾಬಿ ಹೂಗಳ ಕಡೆ ದೃಷ್ಟಿ ಹಾಯಿಸಿದ. ‘ನೀನು ಲ್ಯಾಂಗ್ಟನ್‌ನ ಇಷ್ಟಪಡುತ್ತೀಯಾ?’ ಅವನು ಈ ಪ್ರಶ್ನೆಯನ್ನು ಕೇಳಿದಾಗ ಅವನ ಧ್ವನಿಯಲ್ಲಿ ಸೌಮ್ಯತೆಯಿತ್ತು.

ಹ್ಯಾರಿಸನ್ ಬೆಚ್ಚಿದ. ಈ ಪ್ರಶ್ನೆಯನ್ನು ಅವನು ನಿರೀಕ್ಷಿಸಿರಲಿಲ್ಲವೆಂಬುದು ಅವನ ಮಾತಿನಲ್ಲಿ ಕಂಡು ಬಂತು. ‘ನಾನು ಹೇಳಬೇಕೆಂದರೆ, ನಾನು ಖಂಡಿತವಾಗಿಯೂ ಅವನನ್ನು ಇಷ್ಟಪಡುತ್ತೇನೆ. ನಾನ್ಯಾಕೆ ಇಷ್ಟಪಡಬಾರದು?’

‘ನೀನು ಇಷ್ಟಪಡುತ್ತಿಯೋ ಇಲ್ಲವೋ ನನಗೆ ಗೊತ್ತಿರಲಿಲ್ಲ’ ಎಂದು ಪ್ವರೊ ಶಾಂತವಾಗಿ